**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>**

ಸಿ.ಸಿ. ನಂಃ 1004/2016 ಸಿಡಬ್ಲೂ: 1 ಪಿಡಬ್ಲೂ: 1

ಪ್ರಮಾಣವಚನ ಬೋಧಿಸಲಾಯಿತು ದಿಃ 15-10-2025

ಹೆಸರು : ಯಲ್ಲಾರೆಡ್ಡಿ

ತಂದೆ ಹೆಸರು : ಪಾಂಡುರಂಗ

ವಯಸ್ಸು : 38 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸಸ್ಥಳ : ಬಟಗೇರಾ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ದೂರಾಗಿದ್ದು. ಸಾಕ್ಷಿಯು ಸದರಿ ದಾಖಲಾತಿ ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಆದರೇ ನಿಪಿ-1 ರಲ್ಲಿರುವ ವಿಷಯಗಳು ನನಗೆ ಗೊತ್ತಿಲ್ಲ.

ಚಾ ಸಾ 7 ನನ್ನ ಹೆಂಡತಿ. ಆರೋಪಿತರು ನನಗೆ ಪರಿಚಯ. ಸುಮಾರು 7 ವರ್ಷಗಳ ಹಿಂದೆ ನನ್ನ ಮತ್ತು ಆರೋಪಿತರ ನಡುವೆ ನನ್ನ ಮನೆಯ ಹತ್ತಿರ ರಾತ್ರಿ 09-00 ಗಂಟೆ ಸುಮಾರಿಗೆ ಜಗಳ ಆಗಿತ್ತು. ನಾನು ನನ್ನ ಮನೆಯಲ್ಲಿ ಊಟ ಮಾಡುತ್ತಿರುವಾಗ ಆರೋಪಿತರೆಲ್ಲಾರು ಬಂದು ಜಗಳ ಮಾಡಿದ್ದಾರೆ. ಯಾರು ಎಲ್ಲಿ ಹೊಡೆದಿರುತ್ತಾರೆ ಎಂಬುದರ ಬಗ್ಗೆ ನಿಖರವಾಗಿ ಹೇಳಲು ಬರುವುದಿಲ್ಲ ಯಾಕೆಂದರೆ ಜಗಳ ಸಮಯದಲ್ಲಿ ಕತ್ತಲು ಆಗಿತ್ತು. ಆರೋಪಿತರು ನನಗೆ ಕಟ್ಟಿಗೆ ಮತ್ತು ಕಡಜಿಯಿಂದ ಹೊಟ್ಟೆಗೆ ಮತ್ತು ತಲೆಗೆ ಹೋಡೆದಿರುತ್ತಾರೆ. ಜಗಳ ನಡೆಯುತ್ತಿರುವಾಗ ಚಾ ಸಾ 4 ರಿಂದ 7 ರವರು ಬಂದು ಜಗಳ ಬಿಡಿಸಿರುತ್ತಾರೆ. ಜಗಳ ಆದ ನಂತರ ನಾನು ಸೇಡಂ ನಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪ ಡೆದುಕೊಂಡಿರುತ್ತೇನೆ. ತದ ನಂತರ ಮುಂದಿನ ಚಿಕಿತ್ಸೆಯನ್ನು ಸರ್ಕಾರಿ ಜಿಲ್ಲಾ ಆಸ್ಪತ್ರೆ ಕಲಬುರಗಿಯಲ್ಲಿ ಪಡೆದುಕೊಂಡಿರುತ್ತೆನೆ. ಈ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಗೆ ಒಂದು ಬಡಿಗೆಯನ್ನು ತೋರಿಸಲಾಗಿ ಸಾಕ್ಷಿಯ ಆರೋಪಿತರು ಇದೇ ಬಡಿಗೆಯಿಂದ ಹೆಡೆದಿರುತ್ತಾರೆ ಎಂದು ಒಪ್ಪಿ ಕೊಂಡಿರುವುದರಿಂದ ಅದನ್ನು ಮು ಮಾ -1 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀಸವಾಲುಃ** ಮಾನ್ಯ ಸ.ಸ.ಅ ರವರಿಂದ:

ದಿಃ07-06-2016 ರಂದು ರಾತ್ರಿ 08-00 ಗಂಟೆ ಸುಮಾರಿಗೆ ನಾನು ಮತ್ತು ಚಾ ಸಾ 7 ರವರು ನಮ್ಮ ಮನೆಯಲ್ಲಿದ್ದಾಗ ಆರೋಪಿತರು ಬಂದು ಜಗಳ ತೆಗೆದಿರುತ್ತಾರೆ ಎಂದರೆ ಸರಿ. ಆಗ 1 ನೇ ಆರೋಪಿತನು ನನಗೆ ಹೇ ರಂಡಿ ಮಗನೇ ಎಲ್ಲಾ ಬಾ ಹೊರಗಡೆ ಅಂತಾ ಅವಾಚ್ಯ ಶಬ್ದಗಳಿಂದ ಬೈದಿದ್ದನು ಎಂದರೆ ಸರಿ. ಆಗ 2 ನೇ ಆರೋಪಿತನು ಕಡಚಿ ತೆಗೆದುಕೊಂಡು ನನ್ನ ಹಣೆಗೆ ಬಲವಾಗಿ ಹೊಡೆದಿರುತ್ತಾನೆ ಎಂದರೆ ಸರಿ. ಆದ್ದರಿಂದ ರಕ್ತಗಾಯ ಆಗಿತ್ತು ಎಂದರೆ ಸರಿ. ಜಗಳ ಬಿಟ್ಟು ಹೋಗುವಾಗ ಆರೋಪಿತರೆಲ್ಲಾರು ನನಗೆ ಜೀವ ಬೆದರಿಕೆ ಹಾಕಿದ್ದರು ಎಂದರೆ ಸರಿ.

ಈ ಹಂತದಲ್ಲಿ ಸ ಸ ಅ ರವರು ಮುದ್ದೆ ಮಾಲು ಇರದೇ ಇರುವುದರಿಂದ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ . ದಂ. ಸೇಡಂ.**